**<u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>**

ಸಿ.ಸಿ. ನಂ.131/2022

(368/2018)

ಪಿ.ಡಬ್ಯೂಃ 3

ಸಾಕ್ಷಿದಾರರ ಹೆಸರು : ದೇವಕಿ ರಮೇಶ್ ಹರಿಕಂತ್ರ

ಗಂಡನ ಹೆಸರು : ರಮೇಶ್

ವಯಸ್ಸು : 36 ವರ್ಷ

ಉದ್ಯೋಗ : ಅಂಗವಾಡಿ ಕಾರ್ಯಕರ್ತೆ

ವಾಸ : ಬೆಟ್ಕುಳಿ

ದಿನಾಂಕಃ 12-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಪಿರ್ಯಾದಿ ಪರ ಶ್ರೀಮತಿ ಎಸ್.ಎನ್.ಎಚ್. ವಕೀಲರಿಂದಃ

1. ನಾನು ಫೊರಸ್ ಫುಡ್ಸ್, ಕಂಪನಿ ಕಾರೆಬೈಲ್ ಅಂಕೋಲಾದಲ್ಲಿ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ. ಆರೋಪಿ ಮತ್ತು ಪಿರ್ಯಾದಿ ನನಗೆ ಪರಿಚಿತರು. ಅವರು ಆಳುಗಳನ್ನು ಸದ್ರಿ ಕಂಪನಿಗೆ ಒದಗಿಸುತ್ತಿದ್ದರು. ಆ ಬಾಬ್ತು ಅವರು ಸದ್ರಿ ಕಂಪನಿ ಜೊತೆ ಲಿಖಿತ ಒಪ್ಪಂದ ಮಾಡಿಕೊಂಡಿದ್ದರು. ಸದ್ರಿ ಆಳುಗಳು ಸಿಗಡಿಯನ್ನು ಸ್ವಚ್ಚ ಮಾಡುವ ಕೆಲಸ ಮಾಡುತ್ತಿದ್ದರು. ಸದ್ರಿ ಆಳುಗಳು ಮಾಡುತ್ತಿದ್ದ ಆ ಕೆಲಸದ ಲೆಕ್ಕವನ್ನು ನಾನು ಬರೆದುಕೊಳ್ಳುತ್ತಿದ್ದೆ. ಆ ಲೆಕ್ಕವನ್ನು ಬರೆಯುವ ಪುಸ್ತಕವನ್ನು ಆರೋಪಿಯಲ್ಲಿರುತ್ತಿದ್ದು, ಅದನ್ನು ನಾನು ಬರೆದು ಅವರಿಗೆ ಕೊಡುತ್ತಿದ್ದೆ. ಆ ರೀತಿ ಲೆಕ್ಕ ಬರೆಯುತ್ತಿದ್ದ ಪುಸ್ತಕದಲ್ಲಿ ನಾನು ಚಿತ್ತು ಮಾಡಿಲ್ಲ. ಆ ಪುಸ್ತಕದಲ್ಲಿ ನಾನು ಬಿಳಿ ಶಾಹಿಯನ್ನು ಚಿತ್ತಿನ ಮೇಲೆ ಹಚ್ಚುತ್ತಿರಲಿಲ್ಲ. ಅದರಲ್ಲಿ ಎಲ್ಲೂ ಕೂಡ ಚಿತ್ತು ಆದ ಬಗ್ಗೆ ಚಿಕ್ಕ ಸಹಿ ಮಾಡಿ ನಾನು ತೋರಿಸಿರುವುದಿಲ್ಲ.

2. ಆರೋಪಿಯು ನಿಜವಾದ ಆಳುಗಳ ಸಂಖ್ಯೆಗಿಂತ ಹೆಚ್ಚು ಆಳುಗಳನ್ನು ತೋರಿಸಿ ನಮೂದು ಮಾಡಿಸಿರುವುದರಿಂದ ಅವರ ಮತ್ತು ಪಿರ್ಯಾದಿ ಮದ್ಯೆ ಜಗಳವಾಯಿತು. ಅವರಿಬ್ಬರ ಮದ್ಯೆ ಆ ರೀತಿ ಜಗಳವಾಗಿರುವುದರಿಂದ ನಾನು ಆ ಕೆಲಸವನ್ನು ತ್ಯಜಿಸಿದೆ. ಸದ್ರಿ ಕಂಪನಿ ಅವರು ಒದಗಿಸಿದ ಆಳುಗಳ ಆಧಾರದಲ್ಲಿ ಹಣ ಅವರಿಬ್ಬರಿಗೆ ಪಾವತಿ ಮಾಡುತ್ತಿದ್ದರು. ಅವರಿಬ್ಬರು ಆಳುಗಳಿಗೆ ಪಾವತಿ ಮಾಡುತ್ತಿದ್ದರು. ಆ ರೀತಿ ಹೆಚ್ಚಿನ ಸಂಖ್ಯೆಯ ಆಳುಗಳನ್ನು ತೋರಿಸಿರುವುದರಿಂದ ಕಂಪನಿಗೆ ನಷ್ಟವಾಗಿರಲಿಲ್ಲ. ಕಂಪನಿ 5 ಕೆ.ಜಿ.ಯಷ್ಟು ಸಿಗಡಿಗೆ ಇಂತಿಷ್ಟು ಪಾವತಿ ಎಂದು ನಿಗದಿಪಡಿಸಿದ್ದರು. ಅವರಿಬ್ಬರ ಮದ್ಯೆ ಆದ ಆ ಜಗಳವನ್ನು ಯಾರು ಬಗೆಹರಿಸಿದರು ಎಂದು ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.